

ವಿದ್ಯಾರ್ಥಿಗಳ ಜೊತೆ
ರಂಜಿತ್‌ಸಿಂಹ ದಿಸಳೆ

**● ಈ ಹೊತ್ತಿನ ಶೈಕ್ಷಣಿಕ ಸವಾಲುಗಳು**

ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ಕಾರಣಕ್ಕೆ ಶಾಲೆಗೆ ದಾಖಲಾಗುವ ಮಕ್ಕಳ ಪ್ರಮಾಣ ಕಡಿಮೆ. ಶಾಲೆಗೆ ಬಂದ ಮಕ್ಕಳೂ ತಮ್ಮ ಶಿಕ್ಷಣವನ್ನು ಒಂದು ಹಂತದ ನಂತರ ಮುಂದುವರೆಸುವುದಿಲ್ಲ. ಅನುತ್ತೀರ್ಣರಾಗುವುದು, ಉದ್ಯೋಗ, ಮದುವೆ – ಹೀಗೆ ಬೇರೆ ಬೇರೆ ಕಾರಣಗಳಿಗಾಗಿ ಶಾಲೆಯನ್ನು ಅರ್ಧಕ್ಕೆ ಬಿಡುತ್ತಾರೆ. ಬಡತನ ಮತ್ತು ಸಾಂದರ್ಭಿಕವಾಗಿ ಎದುರಾಗುವ ಸಣ್ಣಪುಟ್ಟ ಅಡಚಣೆಗಳು ಅವರ ಪಾಲಿಗೆ ದಾಟಲಾಗದ ದೊಡ್ಡ ಗುಡ್ಡದಂತೆ ಗೋಚರಿಸುತ್ತವೆ. ಅವು ಮೀರಲಾಗದ ಸಮಸ್ಯೆಗಳೇನಲ್ಲ ಎನ್ನುವುದನ್ನು ಮಕ್ಕಳು ಮತ್ತು ಪೋಷಕರ ಮನಸ್ಸಿಗೆ ನಾಟುವಂತೆ ತಿಳಿಸುವುದು ಶಿಕ್ಷಕರಿಗೆ ದೊಡ್ಡ ಸವಾಲು.

ಶಾಲೆಗೆ ಬರುವ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಸಮರ್ಪಕವಾಗಿ ಸಿಗುತ್ತಿಲ್ಲ. ಇವತ್ತಿನ ಸಂದರ್ಭದಲ್ಲಿ ಜಾಗತಿಕ ಶಿಕ್ಷಣ ವ್ಯವಸ್ಥೆ ಡಿಜಿಟಲೀಕರಣಗೊಂಡಿದೆ. ಆ ವೇಗಕ್ಕೆ ಹೊಂದಿಕೊಳ್ಳಲು ಆಗದಷ್ಟು ನಾವು ಹಿಂದುಳಿದಿದ್ದೇವೆ. ನಮ್ಮ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳೇ ಸರಿಯಾಗಿ ಇಲ್ಲ. ಇಂತಹ ಸಂಕೀರ್ಣ ಪರಿಸ್ಥಿತಿಯನ್ನು ಸರಿದೂಗಿಸಿಕೊಂಡು ನಮ್ಮ ಮಕ್ಕಳಿಗೆ ಅಕ್ಷರದ ಅರಿವನ್ನು ಹುಟ್ಟಿಸಬೇಕಿದೆ.

ಮೂಲಭೂತ ಸೌಲಭ್ಯದ ಕೊರತೆಯನ್ನು ಸರಿದೂಗಿಸಲು ಯೋಜನೆಗಳು ಬೇಕು. ಶಾಲೆಗಳಲ್ಲಿ ಸವಲತ್ತುಗಳನ್ನು ಕಲ್ಪಿಸಲು ಸರ್ಕಾರಗಳು ತಮ್ಮ ಬಜೆಟ್‌ನಲ್ಲಿ ಹಣವನ್ನು ಮೀಸಲಿಡಬೇಕು. ಶಿಕ್ಷಣಕ್ಕೆ ಹೆಚ್ಚಿನ ಹಣವನ್ನು ನೀಡಿದರೆ ಸಾಲದು, ಅದನ್ನು ಸಂಪೂರ್ಣ ವಿನಿಯೋಗಿಸಬೇಕು.

**● ಮಾತೃಭಾಷಾ ಮಾಧ್ಯಮದ ಅಗತ್ಯ**

ಮಾತೃಭಾಷಾ ಮಾಧ್ಯಮ ಶಿಕ್ಷಣ ಅತ್ಯಂತ ಮುಖ್ಯ. ಮಾಧ್ಯಮದ ಭಾಷೆ ಕಲಿಕೆಗೆ ಅಡ್ಡಿಯಾಗಬಾರದು. ಹೊಸ ಶಿಕ್ಷಣ ನೀತಿಯೂ ಮಾತೃಭಾಷಾ ಮಾಧ್ಯಮಕ್ಕೆ ಮಹತ್ವ ನೀಡಿದೆ. ನಾವೂ ಅದಕ್ಕೆ ಹೆಚ್ಚಿನ ಮಹತ್ವವನ್ನು ನೀಡಬೇಕಿದೆ. ಈ ಬಗ್ಗೆ ಹೊಸದಾಗಿ ವೃತ್ತಿಯನ್ನು ಆರಂಭಿಸುವ ಯುವ ಶಿಕ್ಷಕರಿಗೆ ಸಮರ್ಪಕ ಮಾರ್ಗದರ್ಶನ ಅಗತ್ಯ ಅನ್ನಿಸುತ್ತದೆ. ಹೊಸ ಶಿಕ್ಷಕರಿಗೆ, ಅನುಭವಿ ಶಿಕ್ಷಕರ ಜೊತೆ ಬೆರೆತು ಕೆಲಸ ಮಾಡುವ ವಾತಾವರಣ ಕಲ್ಪಿಸಬೇಕು. ಈ ರೀತಿಯ ಪ್ರಾಯೋಗಿಕ ತರಬೇತಿ ಪರಿಣಾಮಕಾರಿ ಆಗಬಲ್ಲದು.

**● ಮೇಷ್ಟ್ರು ನೆನಪೇ ಸಂಭ್ರಮ**

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯಲ್ಲಿ ಶಿಕ್ಷಕರ ಪಾಲು ಗಣನೀಯವಾದುದು. ಈ ನಿಟ್ಟಿನಲ್ಲಿ ರಾಜೇಂದ್ರ ಜಿ. ಮಾನೆ ಎನ್ನುವ ನನ್ನ ಶಿಕ್ಷಕರನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಅವರ ನೆನಪೇ ಖುಷಿ ಉಂಟುಮಾಡುತ್ತದೆ. ನನ್ನ ಮೇಷ್ಟ್ರು ಮಕ್ಕಳ ಜೊತೆ ಹೆಚ್ಚು ಬೆರೆಯುತ್ತಿದ್ದರು. ತಮ್ಮ ವಿದ್ಯಾರ್ಥಿಗಳ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಮಾತ್ರವಲ್ಲ, ಸಮಸ್ಯೆ ಪರಿಹರಿಸಲು ಪರಿಶ್ರಮಿಸುತ್ತಿದ್ದರು. ನನ್ನ ಜೀವನದಲ್ಲಿಯೂ ಮಾನೆ ಮೇಷ್ಟ್ರು ಹಲವು ಬಗೆಯಲ್ಲಿ ಸಹಾಯ ಮಾಡಿದ್ದಾರೆ. ಅವರಿಗೆ ತಾನು ಕೃತಜ್ಞ.

**● ಕುಟುಂಬದ ಪ್ರೇರಣೆ**

2009ರಲ್ಲಿ ಶಿಕ್ಷಕನಾಗಿ ನೇಮಕವಾಗಿ 'ಪರಿಟೆವಾಡಿ' ಗ್ರಾಮಕ್ಕೆ ಬಂದೆ. ಅಲ್ಲಿಂದ ಮುಂದಿನ ನನ್ನ ವೃತ್ತಿಜೀವನ ತೆರೆದ ಪುಸ್ತಕ. ಕುಟುಂಬದ ಬಗ್ಗೆ ಹೇಳುವುದಾದರೆ, ನನಗೆ ಓರ್ವ ಸಹೋದರ ಹಾಗೂ ಸಹೋದರಿ ಇದ್ದಾರೆ. ಸಹೋದರಿ ಶಿಕ್ಷಕಿ, ಸಹೋದರ ಎಂಜಿನಿಯರ್. ನಮ್ಮ ತಂದೆ ಕೂಡ ಶಿಕ್ಷಕರು. ತಾಯಿ ಗೃಹಿಣಿ. ಇಡೀ ಕುಟುಂಬದ ಪ್ರೇರಣೆ, ಒತ್ತಾಸೆ ನನ್ನ ಸಾಧನೆಯ ಹಿಂದಿದೆ.

**● ಸರ್ಕಾರಿ ಸೇವೆಯಲ್ಲೇ ಮುಂದುವರೆಯುವೆ**

ರಾಜಕೀಯ ಸ್ಥಾನಮಾನದ ಬಗ್ಗೆ ಮಾತನಾಡುವುದು (ದಿಸಳೆ ಅವರನ್ನು ಮೇಲ್ಮನೆಗೆ ನಾಮಕರಣ ಮಾಡಲಾಗುತ್ತದೆ ಎನ್ನುವ ಸುದ್ದಿಗೆ ಪ್ರತಿಕ್ರಿಯೆ) ವಿವಾದಕ್ಕೆ ಕಾರಣವಾಗಬಹುದು. ನಾನೊಬ್ಬ ಸರ್ಕಾರಿ ಉದ್ಯೋಗಿ. ಸರ್ಕಾರಿ ಸೇವಕನಾಗಿಯೇ ಕೆಲಸ ಮಾಡುತ್ತೇನೆ.

**● ನಡೆದು ಬಂದ ದಾರಿ**

ನಾನು ಬೆಳೆದು ಬಂದ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿ ಇನ್ನೂ ಜೀವಂತವಿದೆ. ಅದು ಸಾಕ್ಷರತೆಯನ್ನು ಸಾಧಿಸಲು ದೊಡ್ಡ ಸವಾಲಾಗಿದೆ. ನಾನು ಶಿಕ್ಷಕನಾಗಿ ವೃತ್ತಿ ಆರಂಭಿಸಿದ ದಿನಗಳಲ್ಲಿ ಮಕ್ಕಳ ಹಾಜರಾತಿಯೇ ದೊಡ್ಡ ಸಮಸ್ಯೆಯಾಗಿತ್ತು. ಅದಕ್ಕೆ ಪಾಲಕರಲ್ಲಿಯ ನಿರಾಸಕ್ತಿಯೂ ಕಾರಣವಾಗಿತ್ತು. ಮೂಲಭೂತ ಸೌಲಭ್ಯಗಳೇ ಇಲ್ಲದ ಸೊಲ್ಲಾಪುರದ ಗಡಿ ಪ್ರದೇಶದಲ್ಲಿ ಸಮಸ್ಯೆಗಳು ಇನ್ನಷ್ಟು ಹೆಚ್ಚು ಹಾಗೂ ಭಿನ್ನ. ನಾನು ಮರಾಠಿ ಮಾಧ್ಯಮದ ಶಿಕ್ಷಕ. ಆದರೆ, ನನ್ನ ಮರಾಠಿ ಶಾಲೆಯ ಮಕ್ಕಳಿಗೆ ಕನ್ನಡ ಬಿಟ್ಟರೆ ಬೇರೆ ಭಾಷೆ ಗೊತ್ತಿಲ್ಲ. ಮಕ್ಕಳಿಗೆ ಕಲಿಕೆಯ ಪ್ರೀತಿಯನ್ನು ಹುಟ್ಟಿಸಲು ಅವರ ಭಾಷೆಯಲ್ಲಿಯೇ ಹೇಳಬೇಕು ಎಂಬ ನಂಬಿಕೆ ನನ್ನದು. ಹಾಗಾಗಿ, ಕನ್ನಡ ಬಲ್ಲ ಬೇರೆ ಶಿಕ್ಷಕರ ಸಹಾಯವನ್ನು ಪಡೆದು ಮರಾಠಿ ಪಠ್ಯವನ್ನು ಕನ್ನಡಕ್ಕೆ ಭಾಷಾಂತರ ಮಾಡಿಸಿದೆ. ಆ ಪಠ್ಯಕ್ಕೆ ಡಿಜಿಟಲ್ ಸ್ವರೂಪ ನೀಡಲಾಯಿತು. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ತರಗತಿಯ ನೇರಪ್ರಸಾರ ಮೊಬೈಲ್ ಪರದೆಯ ಮೇಲೆ ಅನಾವರಣ ಆಗುವಂತೆ ಮಾಡಲಾಯಿತು. ನಮ್ಮ ಪ್ರಯತ್ನ ಫಲಪ್ರದವಾಗಿದೆ.

ಪ್ರತಿಕ್ರಿಯಿಸಿ: feedback@sudha.co.in



## ಮೊದಲ ದಿನ ದಿಗಿಲು

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಮಾಢಾ ತಾಲ್ಲೂಕಿನ ಪರಿಟೆವಾಡಿ ದಿಸಳೆ ಅವರ ಕರ್ಮಭೂಮಿ. ಮರಾಠಿ ಮಾಧ್ಯಮದಲ್ಲಿ ಓದಿದ್ದ ದಿಸಳೆ, ಶಿಕ್ಷಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದ್ದು 2009ರಲ್ಲಿ. ಮೊದಲ ದಿನ ಅವರು ಶಾಲೆಗೆ ಹೋದಾಗ ಅಲ್ಲಿಯ ವಾತಾವರಣ ದಿಗಿಲು ಹುಟ್ಟಿಸಿತಂತೆ. ಅಲ್ಲಿಯ ಮಕ್ಕಳಿಗೆ ಸರಿಯಾಗಿ ಮರಾಠಿ ಬರುತ್ತಿರಲಿಲ್ಲ; ದಿಸಳೆ ಅವರಿಗೆ ಕನ್ನಡ ಗೊತ್ತಿರಲಿಲ್ಲ. ಶಾಲೆ ಕೂಡ ಮೂಲಭೂತ ಅವಶ್ಯಕತೆ ಕೊರತೆಯಿಂದ ಸೊರಗಿತ್ತು. ಹಾಜರಾತಿ ಕನಿಷ್ಠ ಪ್ರಮಾಣದಲ್ಲಿತ್ತು. ಈ ಸವಾಲುಗಳನ್ನು ತಮ್ಮದೇ ಆದ ರೀತಿಯಲ್ಲಿ ಪರಿಹರಿಸಿಕೊಂಡ ದಿಸಳೆ ಅವರ ಸಾಧನೆಗೆ 'ಗ್ಲೋಬಲ್ ಟೀಚರ್ ಪ್ರೈಜ್' ಒಲಿದುಬಂದಿದೆ. ಆ ಮೂಲಕ ಸಾಕ್ಷರ ಕಾಳಜಿಯ ಜಗತ್ತಿನ ಕಣ್ಣು ಪುಟ್ಟ ಗ್ರಾಮದ ಮೇಲೆ ಬೀಳುವಂತೆ ಆಗಿದೆ.